ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 14-12-1997.

# *ವ್ಯರ್ಥ ಮತ್ತು ನಕಾರತ್ಮಕತೆಯನ್ನು ಅವೈಡ್(ತಿರಸ್ಕಾರ) ಮಾಡಿ ಅವಾರ್ಡ್(ಪ್ರಶಸ್ತಿ) ಪಡೆಯುವ ಪಾತ್ರರಾಗಿ*

(व्यर्थ और नेगेटिव को अवाइड कर अवार्ड लेने के पात्र बनो)

ಇಂದು ಬಾಪ್‌ದಾದಾರವರು ಪರಮಾತ್ಮನ ಪ್ರೀತಿಯ ಪಾತ್ರ ಆತ್ಮರನ್ನು ನೋಡುತ್ತಿದ್ದಾರೆ. ಪರಮಾತ್ಮನ ಪ್ರೀತಿ ಆನಂದಮಯ ಉಯ್ಯಾಲೆಯಾಗಿದೆ ಅದರಿಂದ ಸುಖದಾಯಿಯ ಉಯ್ಯಾಲೆಯಲ್ಲಿ ಸದಾ ತೂಗುತ್ತಿರುತ್ತಾರೆ. ಪರಮಾತ್ಮನ ಪ್ರೀತಿ ಅನೇಕ ಜನ್ಮಗಳ ದುಃಖವನ್ನು ಒಂದು ಸೆಕೆಂಡ್‌ನಲ್ಲಿ ಸಮಾಪ್ತಿ ಮಾಡಿಬಿಡುತ್ತದೆ. ಪರಮಾತ್ಮನ ಪ್ರೀತಿ ಸರ್ವ ಶಕ್ತಿ ಸಂಪನ್ನವಾಗಿದೆ, ನಿರ್ಬಲ ಆತ್ಮರನ್ನು ಶಕ್ತಿಶಾಲಿಯನ್ನಾಗಿ ಮಾಡಿಬಿಡುತ್ತದೆ. ಇಂತಹ ಶ್ರೇಷ್ಠ ಪರಮಾತ್ಮನ ಪ್ರೀತಿಗೆ ನೀವು ಇಷ್ಟು ಸ್ವಲ್ಪ ಆತ್ಮರೇ ಪಾತ್ರರಾಗಿದ್ದೀರಿ. ಇಂತಹ ಶ್ರೇಷ್ಠ ಪಾತ್ರ ಆತ್ಮರನ್ನು ನೋಡಿ ಬಾಪ್‌ದಾದಾರವರು ಹರ್ಷಿತರಾಗುತ್ತಿದ್ದಾರೆ. ಹೇಗೆ ತಂದೆ ಹರ್ಷಿತರಾಗುತ್ತಾರೆ ಹಾಗೆಯೇ ಮಕ್ಕಳೂ ಹರ್ಷಿತರಾಗುತ್ತಾರೆ ಆದರೆ ನಂಬರ್‌ವಾರ್. ಬಾಪ್‌ದಾದಾರವರು ಪ್ರತಿ ಮಗುವಿಗೆ ಹೃದಯದಿಂದ ವರದಾನ ಕೊಡುತ್ತಾರೆ - ಸದಾ ಪರಮಾತ್ಮನ ಪ್ರೀತಿಯ ಉಯ್ಯಾಲೆಯಲ್ಲಿ ತೂಗುತ್ತಿರುವಂತಹ ಅವಿನಾಶಿ ರತ್ನ ಭವ! ಈ ಪ್ರೀತಿಯ ಉಯ್ಯಾಲೆಯಿಂದ ಮನಸ್ಸು ರೂಪಿ ಕಾಲುಗಳನ್ನು ಕೆಳಗಡೆ ಇಡಬೇಡಿ ಏಕೆಂದರೆ ಇಡೀ ವಿಶ್ವದ ಆತ್ಮರಲ್ಲಿ ಪರಮ ಆತ್ಮನಿಗೆ ಮುದ್ದಾದ, ಪ್ರಿಯರಾದ ಮಕ್ಕಳಾಗಿದ್ದೀರಿ. ಆಗ ಬಾಪ್‌ದಾದಾರವರು ಮಕ್ಕಳಿಗೆ ಆಶೀರ್ವಾದ ಕೊಡುತ್ತಾರೆ. ಇದೇ ಪರಮಾತ್ಮನ ಪ್ರೀತಿಯಲ್ಲಿ ಲವಲೀನರಾಗಿರಿ. ಇಂತಹ ಲವಲೀನ ಆತ್ಮರ ಹತ್ತಿರ ಯಾವುದೇ ಪರ-ಸ್ಥಿತಿ ಅಥವಾ ಮಾಯೆಯ ಏರುಪೇರು ಬರಲು ಸಾಧ್ಯವಿಲ್ಲ. ಕೆಳಗಡೆ ಕಾಲು ಇಟ್ಟಾಗ ಮಾಯೆಯು ಭಿನ್ನ-ಭಿನ್ನ ಆಟ ಆಡಲು ಬರುತ್ತದೆ, ಭಿನ್ನ ಭಿನ್ನ ರೂಪ ಧಾರಣೆ ಮಾಡಿ ಆಕರ್ಷಿತರನ್ನಾಗಿ ಮಾಡುತ್ತದೆ. ಲವಲೀನ ಆತ್ಮರ ಸರ್ವ ಶಕ್ತಿಗಳ ಮುಂದೆ ಮಾಯೆಯು ಕಣ್ಣೆತ್ತಿ ನೋಡಲು ಸಾಧ್ಯವಿಲ್ಲ. ನಿಮ್ಮ ಮೂರನೇ ನೇತ್ರ, ಜ್ವಾಲಾಮುಖಿ ನೇತ್ರ ಮಾಯೆಯನ್ನು ಶಕ್ತಿಹೀನ, ಬಲಹೀನರನ್ನಾಗಿ ಮಾಡಿಬಿಡುತ್ತದೆ. ನೀವೆಲ್ಲರೂ ಯಾರು ವಿಶೇಷ ಆತ್ಮರಿದ್ದೀರೋ, ಎಲ್ಲಾ ಬ್ರಾಹ್ಮಣರಿಗೆ ಬಾಪ್‌ದಾದಾರವರ ಮೂಲಕ ಮೂರನೇ ನೇತ್ರ ಲಭಿಸಿದೆ. ಆದರೆ ಆಗಾಗ ಬಹಳ ಪರಿಶ್ರಮದ ಪುರುಷಾರ್ಥ ಮಾಡುತ್ತಾ-ಮಾಡುತ್ತಾ ಮೂರನೇ ನೇತ್ರ ಸುಸ್ತಾಗಿ ಬಿಡುತ್ತಿದೆ ಮತ್ತು ಸುಸ್ತಾಗುವ ಕಾರಣ ಬಂದಾಗಿ ಬಿಡುತ್ತದೆ. ಮಾಯೆಯ ಕಣ್ಣೂ ಸಹ ದೂರಾಂದೇಶಿಯದ್ದಾಗಿರುತ್ತದೆ, ದೂರದಿಂದಲೇ ನೋಡುತ್ತದೆ. ಈಗ ಮಾಯೆಯು ತಿಳಿದುಕೊಂಡಿದೆ - ಈಗ ನನ್ನ ರಾಜ್ಯ ಹೋಯಿತೆಂದರೆ ಹೋಯಿತು, ಇದಕ್ಕಾಗಿ ಮಾಯೆಯಿಂದ ಗಾಬರಿಯಾಗಬಾರದು. ಖುಷಿ-ಖುಷಿಯಿಂದ, ಸರ್ವ ಶಕ್ತಿಗಳ ಆಧಾರದಿಂದ ಅದಕ್ಕೆ ಬಿಳ್ಕೊಡುಗೆ ಕೊಡಿ. ಬರುವುದಕ್ಕೆ ಅವಕಾಶ ಕೊಡಬೇಡಿ, ಬಿಳ್ಕೊಡುಗೆ ಕೊಡಿ. ಅದು ಸಹ ಬ್ರಾಹ್ಮಣ ಆತ್ಮರಿಂದ, ಶ್ರೇಷ್ಠ ಆತ್ಮರಿಂದ ಯುದ್ಧ ಮಾಡುತ್ತಾ

ಮಾಡುತ್ತಾ ಸುಸ್ತಾಗಿಬಿಟ್ಟಿದೆ. ನೀವು ಸ್ವಯಂ ಬಲಹೀನರಾಗಿರುವ ಕಾರಣ ಮಾಯೆಯನ್ನು ಆಹ್ವಾನ ಮಾಡುತ್ತೀರಿ, ಅದು ಸುಸ್ತಾಗಿಬಿಟ್ಟಿದೆ ಆದರೆ ನೀವು ಆಹ್ವಾನ ಮಾಡಿದಾಗ ಅದು ಅವಕಾಶವನ್ನು ತೆಗೆದುಕೊಳ್ಳುತ್ತದೆ. ಈಗ ಶಕ್ತಿಹೀನವಾಗಿ ಬಿಟ್ಟಿದೆ. ನೀವೆಲ್ಲರೂ ಯಾವ ಅನುಭವ ಹೇಳುತ್ತೀರಿ? ಈಗ ಮಾಯೆಯಲ್ಲಿ ಮೊದಲಿನ ತರಹ ಶಕ್ತಿಯಿದೆಯೇ? ಅದರಲ್ಲಿ ಶಕ್ತಿಯಿದೆಯೇ ಅಥವಾ ನೀವು ಶಕ್ತಿಶಾಲಿಯಾಗಿದ್ದೀರಾ? ಅದು ಟ್ರಯಲ್ ಮಾಡುತ್ತದೆ ಏಕೆಂದರೆ ನೀವೇ ಆಹ್ವಾನ ಮಾಡಿದಾಗ ಅದು ಏಕೆ ಅವಕಾಶ ಕೊಡುವುದಿಲ್ಲ. ಏಕೆ ಬಲಹೀನರಾಗುತ್ತೀರಿ? ತಂದೆಯ ಪ್ರಶ್ನೆಯಾಗಿದೆ - ಮಾಸ್ಟರ್ ಸರ್ವಶಕ್ತಿವಂತರಾಗಿದ್ದೀರಾ ಇಲ್ಲವೋ? ಎಲ್ಲರೂ ಮಾಸ್ಟರ್ ಸರ್ವಶಕ್ತಿವಂತರಾಗಿದ್ದೀರಾ? ಕೆಲ-ಕೆಲವೊಮ್ಮೆ ಸರ್ವಶಕ್ತಿವಂತರಾಗಿದ್ದೀರಾ ಅಥವಾ ಸದಾ ಸರ್ವಶಕ್ತಿವಂತರಾಗಿದ್ದೀರಾ? ಏನಾಗಿದ್ದೀರಿ? ಸದಾ ಶಕ್ತಿಶಾಲಿಯಾಗಿದ್ದೀರಾ? ಮಾಯೆಯನ್ನು ಈಗ ನಿಮ್ಮ ಹತ್ತಿರ ಕಳಿಸಲೇ? ನೀವು ಅದನ್ನು ಕರೆಯಬೇಡಿ. ತಂದೆಯು ಮಾಯೆಗೆ ಈಗ ಸಮಾಪ್ತಿಯಾಗು ಎಂದು ಹೇಳುತ್ತಿದ್ದಾರೆ. ಮಾಯೆ ತಂದೆಗೆ ಹೇಳುತ್ತದೆ - ನನ್ನನ್ನು ಆಹ್ವಾನ ಮಾಡುತ್ತಿದ್ದಾರೆ. ತಂದೆ ಏನು ಮಾಡುವರು? ಒಂದುವೇಳೆ ಯಾವುದೇ ಪ್ರಕಾರದ ಬಲಹೀನತೆ ಮನಸ್ಸಿನಲ್ಲಿ, ವಚನದಲ್ಲಿ, ಸಂಬಂಧ-ಸಂಪರ್ಕದಲ್ಲಾದರೂ ಬಂದರೆ ಮಾಯೆಯನ್ನು ಆಹ್ವಾನ ಮಾಡಿದ್ದೀರಿ ಎಂದು ತಿಳಿದುಕೊಳ್ಳಿರಿ. ಅದಕ್ಕೂ ಸಹ ಆಹ್ವಾನೆಯ ತರಂಗಗಳು ಬಹಳ ಬೇಗನೆ ತಲುಪುತ್ತವೆ.

ಈ ಮಹಾ ಉತ್ಸವವಂತೂ ಬಹಳ ಚೆನ್ನಾಗಿ ಆಚರಿಸುತ್ತಿದ್ದೀರಿ. ಆದರೆ ಉತ್ಸಾಹ ಸದಾ ಇರಲಿ ಇದಕ್ಕಾಗಿ ಉತ್ಸವವನ್ನು ಆಚರಿಸುತ್ತೀರಿ. ಈ ವರ್ಷ ಬಹಳ ಉತ್ಸವಗಳನ್ನು ಆಚರಿಸುತ್ತೀದ್ದೀರಿರಲ್ಲವೇ? (ಈ ಗ್ರೂಪ್ನಲ್ಲಿ ಈಶ್ವರೀಯ ಸೇವೆಯ ಆದಿ ರತ್ನ ಸಮಾರೋಹ ಮತ್ತು ಟೀಚರ್ ಸಹೋದರಿಯರ ಸಿಲ್ವರ್ ಜೂಬ್ಲಿಯ ಕಾರ್ಯಕ್ರಮ ಇಟ್ಟುಕೊಳ್ಳಲಾಗಿದೆ). ಪ್ರತಿಇಯೊಂದು ಗ್ರೂಪ್ನಲ್ಲಿ ಉತ್ಸವ ಆಚರಿಸುತ್ತೀದ್ದೀರಿ ಅಂದಾಗ ತಂದೆಯು ಈ ವರ್ಷ ಉತ್ಸವ ಆಚರಿಸುವುದು ಅರ್ಥಾತ್ ಮಾಯೆಗೆ ಬಿಳ್ಕೊಡುಗೆ ಕೊಡುತ್ತಿದ್ದೀರಿ ಎಂದು. ಗೋಲ್ಡನ್ ಚುನ್ನಿ ಧರಿಸಿ ಕುಳಿತು ಬಿಡುವುದಲ್ಲ. ಗೋಲ್ಡನ್ ಚುನ್ನಿ ಧರಿಸುವುದು ಎಂದರೆ ಗೋಲ್ಡನ್ (ಸ್ವರ್ಣಿಮ) ಯುಗವನ್ನು ತರುವುದು. ದೃಶ್ಯವಂತು ಬಹಳ ಚೆನ್ನಾಗಿ ಎನಿಸುತ್ತದೆ. ಗೋಲ್ಡನ್ ಚುನ್ನಿ ಧರಿಸಿದಷ್ಟು ಸಮಯ ಆನಂದವಾಗಿದ್ದು ಆನಂತರ ಸಮಾಪ್ತಿಯಾಗುವ ಹಾಗೆ ಇರಬಾರದು. ಗೋಲ್ಡನ್ ಸ್ಥಿತಿಯ ಚುನ್ನಿ ಅಥವಾ ದುಪಟ್ಟಾ ಸದಾ ಇರಲಿ. ಈ ರೀತಿ ದುಪಟ್ಟಾ ಇಳಿಸಿ, ಉತ್ಸವ ಪೂರ್ಣವಾಯಿತು ಮತ್ತು ಹೇಗೆ ಇದ್ದಿರೋ ಹಾಗೆಯೇ ಇರಿ. ಇದು ಉತ್ಸವ ತರಿಸುವಂತಹ ಕಾರ್ಯಕ್ರಮವಾಗಿದೆ. ಯಾರು ಉತ್ಸವವನ್ನು ಆಚರಿಸಿದರು ಅಥವಾ ಆಚರಿಸುವುದಕ್ಕೆ ಬಂದಿದ್ದೀರೋ ಅವರು ಕೈ ಎತ್ತಿರಿ. ಬಾಪ್ದಾದಾರವರು ಖುಷಿಯಾಗಿದ್ದಾರೆ. ಚೆನ್ನಾಗಿ ಆಚರಿಸಿರಿ ಆದರೆ ಆಚರಿಸುವುದು ಅರ್ಥಾತ್ ತಯಾರಾಗುವುದು ಮತ್ತು ತಯಾರು ಮಾಡುವುದು. ಉತ್ಸವ ಆಚರಿಸುವ ಸಮಯ ತಮಗೆ ತಾವೇ ಅಂಡರ್ಲೈನ್ ಮಾಡಿರಿ **"ನಾನು ಸದಾ ನೆನಪು ಮತ್ತು ಸೇವೆಯ ಉತ್ಸಾಹದಲ್ಲಿ ಇರುವಂತಹ ಆತ್ಮನಾಗಿದ್ದೇನೆ"**. ಬಾಪ್ದಾದಾರವರಿಗೂ ಸಹ ದೃಶ್ಯ ಚೆನ್ನಾಗಿ ಎನಿಸುತ್ತದೆ. ಈ ವರ್ಷ ಬಾಪ್ದಾದಾರವರು ಮಾಯೆಗೆ ಬೀಳ್ಕೊಡುಗೆ ಕೊಡುವ ವರ್ಷವನ್ನು ಆಚರಿಸಬೇಕೆಂದು ಬಯಸುತ್ತಿದ್ದಾರೆ. ಇಂತಹ ಉತ್ಸವ ಆಚರಿಸುವಿರಲ್ಲವೇ? ನಾಳೆ ಏನು ಆಚರಿಸುವಿರಿ, ಇದೇ ರೀತಿ ಆಚರಿಸುವಿರಲ್ಲವೇ? ಸಿಲ್ವರ್ ಜೂಬ್ಲಿ ಆಚರಿಸುವಿರಲ್ಲವೇ? ಗೋಲ್ಡನ್ ಜೂಬ್ಲಿಯಾಗಿರಲಿ, ಸಿಲ್ವರ್

ಜೂಬ್ಲಿಯಾಗಿರಲಿ ಆದರೆ ಉತ್ಸವವೇ ಆಗಿದೆಯಲ್ಲವೇ. ಈ ರೀತಿ ಯೋಚಿಸಬೇಡಿ ನಾವಂತು ಸಿಲ್ವರ್ ಜೂಬ್ಲಿಯವರಾಗಿದ್ದೇವೆ, ಮೊದಲು ಗೋಲ್ಡನ್ನವರು ಆಗಲಿ ನಂತರ ನಾವು ಆಗುವೆವು. ಈ ರೀತಿ ಯೋಚಿಸಬೇಡಿರಿ. ಬಾಪ್‌ದಾದಾ ಉತ್ಸವನ್ನು ಆಚರಿಸುವ ಮತ್ತು ಉತ್ಸವವನ್ನು ಆಚರಿಸದೇ ಇರುವ ಎಲ್ಲಾ ಮಕ್ಕಳಿಗೂ ಹೇಳುತ್ತಿದ್ದಾರೆ. ಬ್ರಾಹ್ಮಣ ಜೀವನದ ಉತ್ಸವವನ್ನಂತು ಆಚರಿಸಿಕೊಂಡಿದ್ದೀರಲ್ಲವೇ? ಎಲ್ಲರೂ ಬ್ರಾಹ್ಮಣರಂತೂ ಆಗಿದ್ದೀರಲ್ಲವೇ ಅಥವಾ ಬ್ರಾಹ್ಮಣರಾಗಿ ಕೂಡ ಇನ್ನು ತಯಾರಾಗಬೇಕಾ? ತಯಾರಾಗಿದ್ದೀರಲ್ಲವೇ? ಆದ್ದರಿಂದ ಬ್ರಾಹ್ಮಣ ಜನ್ಮದ ಉತ್ಸವ ಆಚರಿಸಿಕೊಳ್ಳುವವರು ಎಂದರೆ ಸದಾ ಉತ್ಸಾಹದಲ್ಲಿ ಇರಬೇಕು ಇತರರನ್ನು ಉತ್ಸಾಹದಲ್ಲಿ ತರಬೇಕು ಇದೇ ಬ್ರಾಹ್ಮಣರ ವ್ಯಾಪಾರವಾಗಿದೆ. ಆ ಬ್ರಾಹ್ಮಣರಂತು ಬಾಯಿಂದ ಕಥೆಯನ್ನು ಹೇಳುತ್ತಾರೆ, ನೀವು ಬಾಯಿಂದಲೂ ಸಹ ಹೇಳುತ್ತೀರಿ ಆದರೆ ಉತ್ಸಾಹ ತುಂಬಲು ಹೇಳುತ್ತೀರಿ. ಯಾವುದೇ ಆತ್ಮನಾಗಿರಲಿ ಭಲೇ ನಿಮ್ಮ ವಿರೋಧಿ ಆತ್ಮನಾಗಿರಲಿ, ಏಕೆಂದರೆ ಲೆಕ್ಕಾಚಾರವು ಇಲ್ಲಿಯೇ ಸಮಾಪ್ತಿಯಾಗಬೇಕಾಗಿದೆ. ಆದರೆ ಯಾವುದೇ ಆತ್ಮರಿರಲಿ ಬ್ರಾಹ್ಮಣರ ಕರ್ತವ್ಯವಾಗಿದೆ ಉತ್ಸಾಹ ಭರಿತ ಕಥೆಯನ್ನು ಹೇಳುವುದು. ಉತ್ಸಾಹದ ಮಾತುಗಳೇ ಹೇಳಿರಿ. ಅವರು ಅಳುತ್ತಿದ್ದರೆ, ನೀವು ಅವರನ್ನು ಉತ್ಸಾಹದಲ್ಲಿ ನೃತ್ಯ ಮಾಡಿಸಿರಿ. ಯಾರಾದಾದರೂ ಹೃದಯದಲ್ಲಿ ಉತ್ಸಾಹವಿದ್ದಾಗ ಏನು ಆಗುತ್ತದೆ? ಕಾಲುಗಳು ನೃತ್ಯ ಮಾಡ ತೊಡಗುತ್ತವೆ. ಹೇಗೆ ಈ ಕಾರ್ಯಕ್ರಮ ಮಾಡುತ್ತೀರಲ್ಲವೇ! ಅಂತಿಮದಲ್ಲಿ ಏನು ಮಾಡುತ್ತೀರಿ? ಎಲ್ಲರೂ ನೃತ್ಯ ಮಾಡುತ್ತೀರಲ್ಲವೇ. ಇದಂತೂ ಕಾಲುಗಳ ನೃತ್ಯವಾಗಿದೆ. ಬ್ರಾಹ್ಮಣ ಆತ್ಮರು ಉತ್ಸಾಹ ತರುವುದು ಮತ್ತು ಉತ್ಸಾಹದಲ್ಲಿರದೇ ಇರಲು ಸಾಧ್ಯವಿಲ್ಲ. ಉತ್ಸಾಹ ಅಳಿಸುವಂತಹ ಮಾತುಗಳಿರುತ್ತವೆ ಮತ್ತು ಇರುವವು ಆದರೆ ಬಾಪ್‌ದಾದಾರವರು ಈ ವರ್ಷದಲ್ಲಿ ಎಲ್ಲಾ ಮಕ್ಕಳಿಂದ ಇದೇ ಶುಭ ಆಸೆಯನ್ನಿಟ್ಟುಕೊಳ್ಳುತ್ತಾರೆ. ಕಳೆದು ಹೋದದ್ದು ಕಳೆದು ಹೋಯಿತು, ಇಂದಿನವರೆಗೆ ಯಾರೇ ಎಂತಹ ಆತ್ಮರೇ ಸಂಬಂಧ-ಸಂಪರ್ಕದಲ್ಲಿ ಇರಲಿ, ಹೇಗೆ ಇರಲಿ, ನಕರಾತ್ಮಕತೆಯು ಇದೆ, ಎದುರಿಸುವಂತಹವರು ಇದ್ದಾರೆ, ಬ್ರಾಹ್ಮಣ ಜೀವನವನ್ನು ಅಲುಗಾಡಿಸುವಂತಹವರು ಇದ್ದಾರೆ. ಆದರೆ ಈ ವರ್ಷದಲ್ಲಿ ನಕರಾತ್ಮಕತೆ ಮತ್ತು ವ್ಯರ್ಥ ದೃಷ್ಟಿಕೋನ ಸಮಾಪ್ತಿ ಮಾಡಿ. ಸ್ನೇಹ ಕೊಡಿ, ಶಕ್ತಿಯನ್ನು ಕೊಡಿ. ಒಂದುವೇಳೆ ಸ್ನೇಹ ಕೊಡಲು ಸಾಧ್ಯವಿಲ್ಲ, ಶಕ್ತಿ ಕೊಡಲು ಸಾಧ್ಯವಿಲ್ಲ ಅಂದಾಗ ನೋಡುತ್ತಾ, ಕೇಳುತ್ತಾ, ಸಂಪರ್ಕದಲ್ಲಿ ಬರುತ್ತಾ ವ್ಯರ್ಥ ಮತ್ತು ನಕರಾತ್ಮಕತೆ ಮಾತುಗಳನ್ನು ಹೃದಯದಲ್ಲಿ ಧಾರಣೆ ಮಾಡುವುದು ತಪ್ಪಿಸಿ. ಮನಸ್ಸು ಮತ್ತು ಬುದ್ಧಿಯಲ್ಲಿ ಧಾರಣೆ ಆಗಬಾರದು, ತಪ್ಪಿಸಿ. ಪರಿವರ್ತನೆ ಮಾಡಿ. ನಕರಾತ್ಮಕತೆಯನ್ನು ಅಥವಾ ವ್ಯರ್ಥವನ್ನು ಪರಿವರ್ತನೆ ಮಾಡಿ ಹೃದಯದಲ್ಲಿ ಸಮಾವೇಶಿಸಿಕೊಳ್ಳಿರಿ. ಇಂತಹ ಎರಡು ಮಾತುಗಳನ್ನು ಯಾರು ಅವೈಡ್ ಮಾಡುತ್ತಾರೋ (ತಪ್ಪಿಸುತ್ತಾರೆ) ಅವರಿಗೆ ಬಾಪ್‌ದಾದಾರವರ ಮೂಲಕ, ಬ್ರಾಹ್ಮಣ ಪರಿವಾರದ ಮೂಲಕ ಬಹಳ ಒಳ್ಳೆಯದಕ್ಕಿಂತ ಒಳ್ಳೆಯ, ದೊಡ್ಡದಕ್ಕಿಂತ ದೊಡ್ಡ ಪ್ರಶಸ್ತಿ ಸಿಗುತ್ತದೆ. ಬೇರೆ ಆತ್ಮರಿಗೆ ಪ್ರಶಸ್ತಿಯನ್ನು ಕೊಡುವಂತಹ ಆತ್ಮರಿದ್ದಾರೆ. ಪ್ರಶಸ್ತಿ ಸಿಗುತ್ತದೆಯಲ್ಲವೇ? ಆದರೆ ಇದು ಪರಮಾತ್ಮನ ಪ್ರಶಸ್ತಿಯಾಗಿದೆ. ಅವೈಡ್ ಮಾಡಿ, ಅವಾರ್ಡ್ ತೆಗೆದುಕೊಳ್ಳಿರಿ. ಸಾಹಸ(ಧೈರ್ಯ)ವಿದೆಯೇ? ಒಳ್ಳೆಯದು.

ಪಾಂಡವರು ಯಾರು ಕಾರ್ಯಕ್ರಮವನ್ನು ಮಾಡಿದ್ದಾರೆಯೋ ಅವರಲ್ಲಿ ಧೈರ್ಯವಿದೆಯೇ? ಪ್ರಶಸ್ತಿಯನ್ನು ತೆಗೆದುಕೊಳ್ಳುವಿರಾ? ಎಲ್ಲರು ಕೈ ಎತ್ತಿರಿ, ಇಂದಿನ ದಿನಾಂಕವನ್ನು ಅಂಡರ್ಲೈನ್ (ಗುರುತು) ಮಾಡಿ. ಇಂದಿನ

ದಿನಾಂಕವೇನು? (14 ಡಿಸೆಂಬರ್) ಪ್ರತಿ ತಿಂಗಳಿನ 14ನೇ ದಿನಾಂಕದಂದು ತಮ್ಮನ್ನು ಚೆಕ್ ಮಾಡಿಕೊಳ್ಳಿರಿ. ಒಳ್ಳೆಯದು – ಯಾರೆಲ್ಲಾ ಸಿಲ್ವರ್ ಜೂಬ್ಲಿಯವರು ಪ್ರಶಸ್ತಿಯನ್ನು ತೆಗೆದುಕೊಳ್ಳುವಿರೋ ಅವರು ಕೈ ಎತ್ತಿರಿ. ಹಾಗೆಯೇ ಎತ್ತಬೇಡಿರಿ. ಸಂಕೋಚದ ಕಾರಣ ಎತ್ತಬೇಡಿ. ಬಾಪ್‌ದಾದಾರವರು ಅವಕಾಶವನ್ನು ಕೊಡುತ್ತಾರೆ, ಒಂದುವೇಳೆ ಯಾರಲ್ಲಾದರೂ ಧೈರ್ಯವಿಲ್ಲದಿದ್ದರೆ ಕೈ ಎತ್ತಬೇಡಿರಿ, ಪರವಾಗಿಲ್ಲ. ಬಾಪ್‌ದಾದಾರವರು ಮತ್ತಷ್ಟು ಸಕಾಶಕೊಡುವರು, ಇಂತಹ ಯಾವುದೇ ಮಾತಿಲ್ಲ. ಇನ್ನೂ ಸ್ವಲ್ಪ ಧೈರ್ಯಬೇಕು ಎನ್ನುವರು ಯಾರಾದರೂ ಇದ್ದೀರಾ? ಯಾರಾದರೂ ಸಿಲ್ವರ್ ಜೂಬ್ಲಿಯ ಟೀಚರ್ಗಳು ಈ ರೀತಿ ಇದ್ದೀರಾ? ಇಲ್ಲಿ ಕೈ ಎತ್ತಿಲ್ಲ, ಸಂಕೋಚವಾಗುತ್ತದೆ ಎಂದರೆ ಬರೆದು ಕೊಡಿ. ಯಾವಾಗ ಕಾರ್ಯಕ್ರಮವನ್ನು ಮಾಡುವಿರೋ ಆಗ ಕೊಡಿ. ನಮಗೆ ಹೆಚ್ಚಿಗೆ (ಎಕ್ಸಟ್ರಾ) ಧೈರ್ಯ ಬೇಕೆಂದುಕೊಂಡರೆ ಅವರಿಗಾಗಿ ವಿಶೇಷ ಟ್ಯುಶನ್ ಇಡಲಾಗುವುದು. ಯಾರು ಓದುವುದರಲ್ಲಿ ಬಲಹೀನರಾಗಿರುತ್ತಾರೆಯೋ ಅವರು ಏನು ಮಾಡುತ್ತಾರೆ? ಟ್ಯುಶನ್ ಹೋಗುತ್ತಾರಲ್ಲವೇ? ಒಳ್ಳೆಯದು, ಮಧುಬನದವರು ಕೈ ಎತ್ತಿರಿ, ಎದ್ದು ನಿಲ್ಲಿರಿ. ಮಧುಬನದವರು ಒಳ್ಳೆಯ ಅವಕಾಶವನ್ನು ತೆಗೆದುಕೊಳ್ಳುತ್ತಾರೆ. ಒಳ್ಳೆಯದು. ಮಧುಬನದವರು ಪ್ರಶಸ್ತಿ ತೆಗೆದುಕೊಳ್ಳುವರೇ? ಎಲ್ಲರೂ ಎತ್ತಿದ್ದೀರಾ? ಟ್ಯುಶನ್ ಬೇಡವೇ? ಬಹದ್ದೂರಾಗಿದ್ದೀರಿ. ಒಳ್ಳೆಯದು - ಬಾಪ್‌ದಾದಾರವರು ಲೆಕ್ಕವನ್ನು ತೆಗೆದುಕೊಳ್ಳುವರು. ಮಧುಬನದವರಿಗೆ ಶುಭಾಷಯಗಳು.

ಈ ವರ್ಷ ಬೀಳ್ಕೊಡುಗೆ ಮತ್ತು ಶುಭಾಷಯದ್ದಾಗಿದೆ ಮತ್ತು ಈ ವರ್ಷದಲ್ಲಿ ಮಕ್ಕಳು ಏನು ವಿಶೇಷ ಸಂಕಲ್ಪವನ್ನು ಮಾಡುತ್ತಾರೆ, ಅದನ್ನು ಪ್ರಾಕ್ಟಿಕಲ್ನಲ್ಲಿ ತರುವುದಕ್ಕೆ ಬಾಪ್‌ದಾದಾರವರ ಎಕ್ಸ್ಟ್ರಾ ಸಹಾಯ ಸಿಗುವುದು. ಕೇವಲ ದೃಢವಾಗಿರಿ. ಮಧ್ಯೆ – ಮಧ್ಯೆದಲ್ಲಿ ಡ್ರಾಮಾ ಪೇಪರ್ ತೆಗೆದುಕೊಳ್ಳುವುದು ಆದರೆ ಸಂಕಲ್ಪದಲ್ಲಿ ದೃಢವಾಗಿರಿ. ಸಂಕಲ್ಪ ರೂಪಿ ಕಾಲುಗಳು ಅಲುಗಾಡಬಾರದು, ಅಚಲರಾಗಿರಿ ಆಗ ತಂದೆಯಿಂದ ಎಕ್ಸ್ಟ್ರಾ ಸಹಯೋಗದ ಅನುಭೂತಿಯಾಗುವುದು. ಕೇವಲ ತೆಗೆದುಕೊಳ್ಳುವ ಶಕ್ತಿ ಬೇಕು. ಒಂದು ಬಲ, ಒಂದು ಭರವಸೆ. ಏನೇ ಆಗಲಿ, ಆಗಲೇ ಬೇಕು. ಈ ಸಂಕಲ್ಪ ರೂಪಿ ಕಾಲು ಬಲಶಾಲಿಯಾಗಿರಬೇಕು. ಮಾತುಗಳು ಬರುವವು ಆದರೆ ಹೇಗಗಾದರೆ ನೀವು ವಿಮಾನದಲ್ಲಿ ಇದ್ದರೆ ಮೋಡಗಳು ಕೆಳಗಡೆ ಇರುತ್ತವೆಯೋ ಹಾಗೆಯೇ ಅನುಭವ ಮಾಡುವಿರಿ. ಮೋಡಗಳು ಒಂದು ಮನೋರಂಜನೆಯ ದೃಶ್ಯವಾಗಿ ಬಿಡುತ್ತವೆ. ಇಂತಹ ಎಷ್ಟೇ ಕಪ್ಪು ಮೋಡಗಳಂತಹ ವಿಷಯಗಳು ಬರಲಿ, ಕೆಲವು ಸಮಸ್ಯೆಯ ಪರಿಹಾರ ಅಥವಾ ಸಮಾಧಾನ ಆ ಸಮಯದಲ್ಲಿ ಕಾಣಿಸದೇ ಇರಲಿ ಆದರೆ ಈ ದೃಢ ನಿಶ್ಚಯವಿರಲಿ ಈ ಮೋಡಗಳು ಬರುವುದೇ ಹೋಗುವುದಕ್ಕಾಗಿ. ಈ ಮೋಡ ಚೂರುಚೂರಾಗುವುದಿದೆ, ಇರುವುದಿಲ್ಲ. ಇಂತಹ ಹಾರುವ ಕಲೆಯ ಸ್ಟೇಜ್ನಲ್ಲಿ ಸ್ಥಿತರಾಗಿಬಿಡಿ. ಆಗ ಎಷ್ಟೇ ಆಳ ಕಪ್ಪು ಮೋಡಗಳು ಬಂದರೂ ಚೂರುಚೂರಾಗುವವು ಮತ್ತು ನೀವು ದೃಢತೆಯ ಬಲದಿಂದ ಸಫಲರಾಗಿಯೇ ಬಿಡುವಿರಿ. ಗಾಬರಿಯಾಗಬೇಡಿ, ಇದು ಹೇಗೆ ಆಗಲಿ! ಒಳ್ಳೆಯದೇ ಆಗುವುದು, ಏಕೆಂದರೆ ಬಾಪ್‌ದಾದಾರವರು ತಿಳಿದುಕೊಂಡಿದ್ದಾರೆ ಎಷ್ಟು ಸಮಯ ಹತ್ತಿರ ಬರುತ್ತದೆಯೋ ಅಷ್ಟು ಹೊಸ-ಹೊಸ ವಿಷಯಗಳು, ಸಂಸ್ಕಾರಗಳು, ಲೆಕ್ಕಾಚಾರದ ಕಪ್ಪು ಮೋಡಗಳು ಬರುತ್ತವೆ. ಇಲ್ಲಿಯೇ ಎಲ್ಲವೂ ಸಮಾಪ್ತಿಯಾಗಲಿದೆ. ಕೆಲ ಮಕ್ಕಳು ಹೇಳುತ್ತಾರೆ ದಿನ ಪ್ರತಿದಿನ ಮತ್ತಷ್ಟು ಇಂತಹ ವಿಷಯಗಳು ಹೆಚ್ಚಾಗುತ್ತವೆ ಏಕೆ? ಯಾವ ಮಕ್ಕಳಿಗೆ ಧರ್ಮರಾಜಪುರಿಯಲ್ಲಿ ಕ್ರಾಸ್ ಮಾಡುವ ಅವಶ್ಯಕತೆ

ಇರುವುದಿಲ್ಲವೋ ಅವರ ಸಂಗಮದ ಈ ಅಂತಿಮ ಸಮಯದಲ್ಲಿ ಸ್ವಭಾವ-ಸಂಸ್ಕಾರದ ಎಲ್ಲಾ ಲೆಕ್ಕಾಚಾರ ಇಲ್ಲಿಯೇ ಸಮಾಪ್ತಿಯಾಗುತ್ತಿದೆ. ಧರ್ಮರಾಜಪುರಿಯಲ್ಲಿ ಬರುವುದಿಲ್ಲ. ನಿಮ್ಮ ಮುಂದೆ ಯಮದೂತರು ಬರುವುದಿಲ್ಲ. ಈ ಮಾತುಗಳೇ ಯಮದೂತರಾಗಿದ್ದಾರೆ, ಇಲ್ಲಿಯೇ ಸಮಾಪ್ತಿಯಾಗಲಿದೆ ಇದಕ್ಕಾಗಿ ರೋಗಗಳು ಹೊರಬರುವುದು ಸಮಾಪ್ತಿಯಾಗುವ ಲಕ್ಷಣವಾಗಿದೆ. ಈ ರೀತಿ ಯೋಚಿಸಬೇಡಿ ಸಮಯ ಸಮೀಪವಿದೆ ಎಂದು ಕಾಣಿಸುವುದಿಲ್ಲ, ಮತ್ತಷ್ಟು ವ್ಯರ್ಥ ಸಂಕಲ್ಪಗಳು ಹೆಚ್ಚಿಗೆ ಆಗುತ್ತವೆ. ಆದರೆ ಇವು ಸಮಾಪ್ತಿಯಾಗಲು ಹೊರಬರುತ್ತಿವೆ. ಅವುಗಳ ಕೆಲಸವಾಗಿದೆ ಬರುವುದು ಮತ್ತು ನಿಮ್ಮ ಕೆಲಸವಾಗಿದೆ ಹಾರುವ ಕಲೆಯ ಮೂಲಕ, ಸಕಾಶದ ಮೂಲಕ ಪರಿವರ್ತನೆ ಮಾಡುವುದು. ಗಾಬರಿಯಾಗಬೇಡಿ. ಕೆಲ ಮಕ್ಕಳ ವಿಶೇಷತೆಯಾಗಿದೆ ಹೊರಗಡೆಯಿಂದ ಗಾಬರಿಯಲ್ಲಿರುವುದು ಕಾಣಿಸುವುದಿಲ್ಲ ಆದರೆ ಒಳಗಡೆ ಮನಸ್ಸು ಗಾಬರಿಯಾಗುತ್ತದೆ. ಹೊರಗಡೆಯಿಂದ ಹೇಳುತ್ತಾರೆ ಇಲ್ಲ-ಇಲ್ಲ, ಏನು ಇಲ್ಲ. ಇದಂತು ಆಗೇ ಆಗುತ್ತದೆ ಆದರೆ ಒಳಗಡೆ ಕುಗ್ಗುತ್ತಿರುತ್ತಾರೆ. ಬಾಪ್‌ದಾದಾರವರು ಮೊದಲೇ ತಿಳಿಸಿದ್ದರಲ್ಲವೇ ಗಾಬರಿಯಾಗುವಂತಹ ಮಾತುಗಳು ಬರುತ್ತವೆ ಆದರೆ ನೀವು ಗಾಬರಿಯಾಗಬಾರದು. ತಮ್ಮ ಶಸ್ತ್ರಗಳನ್ನು ಬಿಡಬೇಡಿ. ಯಾರು ಗಾಬರಿಯಾಗುತ್ತಾರೆಯೋ ಅವರ ಕೈಯಲ್ಲಿ ಇರುವ ವಸ್ತುಗಳು ಬಿದ್ದು ಹೋಗುತ್ತವೆ. ಯಾವಾಗ ಮನಸ್ಸಿನಲ್ಲಿ ಗಾಬರಿಯಾಗುತ್ತಾರೆಯೋ ಆಗ ಶಸ್ತ್ರ ಅಥವಾ ಶಕ್ತಿಗಳು ಬಿದ್ದು ಹೋಗುತ್ತವೆ, ಗುಪ್ತವಾಗಿ ಬಿಡುತ್ತವೆ. ಅದಕ್ಕಾಗಿ ಗಾಬರಿಯಾಗಬೇಡಿ, ಮೊದಲೇ ಗೊತ್ತಿದೆ. ತ್ರಿಕಾಲದರ್ಶಿಗಳಾಗಿ, ನಿರ್ಭಯರಾಗಿರಿ. ಬ್ರಾಹ್ಮಣರು ಪರಸ್ಪರ ಸಂಬಂಧದಲ್ಲಿ ನಿರ್ಭಯರಾಗಬಾರದು, ಮಾಯೆಯಿಂದ ನಿರ್ಭಯರಾಗಿರಿ. ಸಂಬಂಧದಲ್ಲಂತು ಸ್ನೇಹ ಮತ್ತು ನಿರ್ಮಾಣವಿದೆ. ಯಾರು ಹೇಗೇ ಇರಲಿ ನೀವು ಹೃದಯದಿಂದ ಸ್ನೇಹವನ್ನು ಕೊಡಿ, ಶುಭ ಬಾವನೆ ಕೊಡಿ, ದಯೆ ತೋರಿಸಿ. ನಿರ್ಮಾಣರಾಗಿ ಅವರನ್ನು ಮುಂದಿಟ್ಟು ಮುಂದೆವರೆಸಿ. ಇದಕ್ಕೆ ಕಾರಣ ರೂಪಿ ನಕರಾತ್ಮಕತೆಯನ್ನು ಸಂಬಂಧ ರೂಪಿ ಸಕರಾತ್ಮಕತೆಯನ್ನಾಗಿ ಮಾಡುವುದು ಎಂದು ಕರೆಯುತ್ತಾರೆ. ಈ ಕಾರಣ, ಈ ಕಾರಣ.... ಕಾರಣ ಅಥವಾ ಸಮಸ್ಯೆಯನ್ನು ಸಕರಾತ್ಮಕತೆಯ ಸಮಾಧಾನವನ್ನಾಗಿ ತಯಾರು ಮಾಡಿರಿ.

ಬಾಪ್‌ದಾದಾರವರಿಗೆ ಒಂದು ಮಾತಿನ ಮೇಲೆ ಕೆಲ ಕೆಲವೊಮ್ಮೆ ನಗು ಬರುತ್ತದೆ. ಗೊತ್ತಿದೆಯೇ ಯಾವ ಮಾತೆಂದು? ಗೊತ್ತಿದೆಯೇ? ಒಂದು ಕಡೆ ಚಾಲೆಂಜ್ ಮಾಡುತ್ತಾರೆ - ಬಾಬಾ ನಾವು ಪ್ರಕೃತಿಜೀತ್ ಆಗುತ್ತೇವೆ. ಪ್ರಕೃತಿಯನ್ನು ಪರಿವರ್ತನೆ ಮಾಡುತ್ತೇವೆ, ಹೀಗೆ ಹೇಳುತ್ತೀರಲ್ಲವೇ? ಪ್ರಕೃತಿಯನ್ನು ಬದಲಾಯಿಸುವಿರಲ್ಲವೇ? ಇಂತಹ ಚಾಲೆಂಜ್ ಮಾಡುವಂತಹವರೇ ಪ್ರಕೃತಿಯನ್ನು ಬದಲಾಯಿಸಲು ಸಾಧ್ಯ. ಆದರೆ ಸಂಬಂಧ ಸಂಪರ್ಕದಲ್ಲಿ ಯಾವುದೇ ಮಾತು ಬಂದಾಗ ಅದನ್ನು ಸಮಾಧಾನ ಮಾಡಲು ಸಾಧ್ಯವಿಲ್ಲ. ಪರಿವರ್ತನೆ ಮಾಡಲು ಸಾಧ್ಯವಿಲ್ಲ ಎನ್ನುತ್ತೀರಿ. ನಗುವ ಮಾತಾಗಿದೆಯಲ್ಲವೇ - ಪ್ರಕೃತಿ ಜಡವಾಗಿದೆ ಅದನ್ನು ಬದಲಾಯಿಸಲು ಪ್ರತಿಜ್ಞೆ ಮಾಡುತ್ತಿದ್ದೀರಿ. ಆದರೆ ಬ್ರಾಹ್ಮಣ ಆತ್ಮರನ್ನು ಪರಿವರ್ತನೆ ಮಾಡಲಾಗುತ್ತಿಲ್ಲ. ಮತ್ತೆ ಏನು ಯೋಚಿಸುತ್ತಿದ್ದೀರಿ ಅವರು ಆಗುತ್ತಿಲ್ಲ, ಇವರು ತಯಾರಾಗುವುದಿಲ್ಲ, ಬದಲಾಗುವುದಿಲ್ಲ ಎನ್ನುತ್ತಿದ್ದೀರಿ. ಆದ್ದರಿಂದ ಪ್ರಕೃತಿಯನ್ನು ಹೇಗೆ ಬದಲಾಯಿಸುತ್ತೀರಿ? ಸ್ವಯಂ ಬದಲಾಗಿ ಇತರರನ್ನು ಬದಲಾಯಿಸಿರಿ. ಅವರು 100% ತಪ್ಪಾದರೂ ಆಗಲಿ ನಿಮ್ಮ ಪ್ರತಿಜ್ಞೆಯೇನು? ತಂದೆಯೊಂದಿಗೆ ಯಾವ ಪ್ರತಿಜ್ಞೆಯನ್ನು ಮಾಡಿದ್ದೀರಿ? ಸ್ವ ಪರಿವರ್ತನೆಯಿಂದ ವಿಶ್ವ ಪರಿವರ್ತನೆ ಮಾಡುತ್ತೇವೆ ಎಂದು. ಇದು ನೆನಪಿದೆಯೇ ಅಥವಾ

ಮರೆತುಬಿಟ್ಟಿದ್ದೀರಾ? ಎಲ್ಲರೂ ನೆನಪಿದೆ ಎನ್ನುತ್ತಾರೆ. ಎಂತಹದ್ದೇ ಮಾತಿರಲಿ, ಮಾತುಗಳನ್ನು ಬದಲಾಯಿಸಲು ಸಹಾಯವನ್ನು ಭಲೇ ತೆಗೆದುಕೊಳ್ಳಿರಿ ಆದರೆ ಬದಲಾಯಿಸುವುದೇ ಕಷ್ಟವಾಗಿದೆ, ಈ ಸರ್ಟಿಫಿಕೇಟ್ ಕೊಡಬೇಡಿ. ನಿಮಗೆ ಸರ್ಟಿಫಿಕೇಟ್ ಕೊಡುವ ಅಧಿಕಾರವನ್ನು ಯಾರು ಕೊಟ್ಟರು? ಈ ರೀತಿ ಯೋಚಿಸುವುದು ಇದು ಆಗುವುದೇ ಇಲ್ಲ, ಸರಿಯಾಗುವುದೇ ಇಲ್ಲ. ನಿಮ್ಮನ್ನು ಯಾರು ಜಡ್ಜ್(ನ್ಯಾಯಾಧೀಶರನ್ನಾಗಿ) ಮಾಡಿದರು? ಹಾಗೆಯೇ ನ್ಯಾಯಾಧೀಶರ ಸೀಟ್ ಮೇಲೆ ಕುಳಿತು ಬಿಡುತ್ತೀರಿ? ಇಲ್ಲವೆಂದರೆ ವಕೀಲರಾಗುತ್ತೀರಿ, ಬಹಳ ಕಾಯಿದೆ ಕಾನೂನೂ ಹೇಳುತ್ತಾ, ವಾದ-ವಿವಾದ ಮಾಡುತ್ತಾ, ಈ ರೀತಿಯಲ್ಲ ಹೀಗೆ. ಹೀಗೆ ಅಲ್ಲ ಹಾಗೆ. ವಕೀಲರಾಗಬೇಡಿರಿ, ಜಡ್ಜ್ಆಗಬೇಡಿರಿ. ಈ ಅಧಿಕಾರವನ್ನು ತಂದೆಯು ಕೊಟ್ಟಿಲ್ಲ, ಯಾರು ನಿಮಿತ್ತರಾಗಿದ್ದಾರೆಯೋ ಅವರ ಸಹಯೋಗ ತೆಗೆದುಕೊಳ್ಳಿರಿ. ಆ ನಿಮಿತ್ತ ಆತ್ಮರು ಸಹ ಬಾಪ್‌ದಾದಾರವರ ಸಲಹೆಯಿಂದ ಮಾಡುತ್ತಾರೆ, ತಮ್ಮ ಮನ್ಮತ ನಡೆಸುವುದಿಲ್ಲ. ಈ ವರ್ಷದಲ್ಲಿ ಈ ಎಲ್ಲಾ ಮಾತುಗಳು ಸಮಾಪ್ತಿ ಮಾಡಿ ಅರ್ಥಾತ್ ಮನಸ್ಸಿನಿಂದ ಪರಿವರ್ತನೆ ಮಾಡಿ, ಅವೈಡ್ ಮಾಡಿ, ಮೇಲೆ ಕಳುಹಿಸಿದ್ದೀರಿ, ಜವಾಬ್ದಾರಿ ಸಮಾಪ್ತಿಯಾಯಿತು. ಪರಸ್ಪರ ಪರಿವರ್ತನೆಯಾಗಲಿಲ್ಲವೆಂದರೆ ನಿಮಿತ್ತ ಆತ್ಮರಿಗೆ ತಲುಪಿಸುವುದು ನಿಮ್ಮ ಕರ್ತವ್ಯವಾಗಿದೆ. ಸ್ವಯಂ ಕಾನೂನನ್ನು ಕೈಯಲ್ಲಿ ತೆಗೆದುಕೊಳ್ಳಬೇಡಿರಿ, ಆಗಲೇ ಪ್ರಶಸ್ತಿಗೆ ಪಾತ್ರರಾಗುವಿರಿ. ಸದಾ ಉತ್ಸಾಹದಲ್ಲಿರಿ ಮತ್ತು ಉತ್ಸಾಹವನ್ನು ಹೆಚ್ಚಿಸಿರಿ, ಇದೇ ಸ್ಮೃತಿಯನ್ನು ಬಾಪ್‌ದಾದಾರವರು ಪ್ರತ್ಯಕ್ಷ ಮಾಡುತ್ತಿದ್ದಾರೆ. ಯಾವಾಗ ಸ್ವಯಂ ಉತ್ಸಾಹದಲ್ಲಿ ಇರುತ್ತೀರೋ ಆಗ ಎಲ್ಲರ ಕೈಯಲ್ಲಿ ಕೈ ಅರ್ಥಾತ್ ಮನಸ್ಸಿನ ಸ್ನೇಹದ ಕೈಯಲ್ಲಿ ಕೈ ಹಾಕಿ ನೃತ್ಯ ಮಾಡುತ್ತೀರಿ, ಖುಷಿಯಾಗುತ್ತೀರಿ. ಸ್ಥೂಲ ಕೈಯಲ್ಲ, ಮನಸ್ಸಿನಿಂದ ಸ್ನೇಹದ, ಸಹಯೋಗದ ಕೈ. ಇದಕ್ಕೇ ಕೈಯಲ್ಲಿ ಕೈ ಸೇರುವುದು ಎಂದು ಹೇಳಲಾಗುತ್ತದೆ. ಸ್ನೇಹ ಏನು ಮಾಡಲು ಸಾಧ್ಯವಿಲ್ಲ, ಇಲ್ಲಿ ಪರಮಾತ್ಮನ ಸ್ನೇಹವಿದೆ, ಪರಮಾತ್ಮನ ಪ್ರೀತಿಯಿದೆ. ಅದೇನು ಮಾಡಲು ಸಾಧ್ಯವಿಲ್ಲ! ಅಸಂಭವ ಎಂಬ ಶಬ್ಧ ಬ್ರಾಹ್ಮಣರ ಡಿಕ್ಷನರಿಯಲ್ಲಿ ಇಲ್ಲ. ಉತ್ಸಾಹದವರು ಎಂದೂ ಯಾವುದೇ ವಿಷಯದಲ್ಲಿ ನಿರಾಶರಾಗುವುದಿಲ್ಲ, ಬಲಹೀನರಾಗುವುದಿಲ್ಲ.

**ನಾಲ್ಕಾರು ಕಡೆಯ ಪರಮಾತ್ಮನ ಪ್ರೀತಿಯ ಸುಖಮಯ, ಆನಂದಮಯ ಉಯ್ಯಾಲೆಯಲ್ಲಿ ತೂಗುತ್ತಿರುವಂತಹವರು, ಲಕ್ಕಿ (ಅದೃಷ್ಟಶಾಲಿ) ಮತ್ತು ಲವಲೀ(ಪ್ರಿಯರು) ಆತ್ಮರಿಗೆ, ಸದಾ ದೃಢ ಸಂಕಲ್ಪದ ಮೂಲಕ ಸಮಾಧಾನ ಸ್ವರೂಪ ಶ್ರೇಷ್ಠ ಆತ್ಮರಿಗೆ, ಪರಮಾತ್ಮನ ಪ್ರಶಸ್ತಿ ತೆಗೆದುಕೊಳ್ಳುವಂತಹ ಯೋಗ್ಯ ಹೀರೋ ಪಾತ್ರಧಾರಿ ಆತ್ಮರಿಗೆ, ಸದಾ ಬಾಪ್‌ದಾದಾರವರ ಪಾಲನೆಗೆ ರಿಟರ್ನ್ ಕೊಡುವಂತಹ ಬಾಪ್‌ದಾದಾರವರ ಹೃದಯ ಸಿಂಹಾಸನಾಧಿಕಾರಿ ಆತ್ಮರಿಗೆ, ಬಾಪ್‌ದಾದಾರವರ ಪದಮಗುಣ, ಕೋಟಿ ಶತಕೋಟಿಗಿಂತಲೂ ಹೆಚ್ಚು ನೆನಪು, ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 14-12-1997.

***ವ್ಯರ್ಥ ಮತ್ತು ನಕಾರಾತ್ಮಕತೆಯನ್ನು ಅವಾಯ್ಡ್(ತಿರಸ್ಕಾರ) ಮಾಡಿ ಅವಾರ್ಡ್(ಪ್ರಶಸ್ತಿ) ಪಡೆದುಕೊಳ್ಳುವ ಪಾತ್ರರಾಗಿರಿ.***

ಉತ್ಸವವನ್ನು ಆಚರಿಸುವ ಸಮಯ ತಮಗೆ ತಾವೇ "ನಾನು ಸದಾ ನೆನಪು(ಸ್ಮೃತಿ) ಮತ್ತು ಸೇವೆಯ ಉತ್ಸಾಹದಲ್ಲಿ ಇರುವಂತಹ ಆತ್ಮನಾಗಿದ್ದೇನೆ" ಎಂದು ಅಂಡರ್ ಲೈನ್ ಮಾಡಿರಿ. ಕಳೆದು ಹೋದದ್ದು ಕಳೆದು ಹೋಯಿತು ಇಂದಿನವರೆಗೆ ಯಾರೇ ಎಂತಹ ಆತ್ಮರೇ ಸಂಭಂದ ಸಂಪರ್ಕದಲ್ಲಿ ಇರಲಿ, ಹೇಗೇ ಇರಲಿ, ನಕಾರಾತ್ಮಕತೆಯೂ ಇದೆ, ಎದುರಿಸುವಂತಹವರು ಇದ್ದಾರೆ, ಬ್ರಾಹ್ಮಣ ಜೀವನವನ್ನು ಅಲುಗಾಡಿಸುವಂತಹವರು ಇದ್ದಾರೆ. ಆದರೆ ಈ ವರ್ಷದಲ್ಲಿ ನಕಾರಾತ್ಮಕತೆ ಮತ್ತು ವ್ಯರ್ಥ ದೃಷ್ಟಿಕೋನವನ್ನು ಸಮಾಪ್ತಿ ಮಾಡಿರಿ. ಸ್ನೇಹವನ್ನು ಕೊಡಿ, ಶಕ್ತಿಯನ್ನು ಕೊಡಿ, ಒಂದು ವೇಳೆ ಸ್ನೇಹ ಮತ್ತು ಶಕ್ತಿಯನ್ನು ಕೊಡಲು ಸಾಧ್ಯವಿಲ್ಲದಿದ್ದಾಗ ನೋಡುತ್ತಾ, ಕೇಳುತ್ತಾ ಸಂಪರ್ಕದಲ್ಲಿ ಬರುತ್ತಲೂ ವ್ಯರ್ಥ ಮತ್ತು ನಕಾರಾತ್ಮಕತೆಯ ಮಾತುಗಳನ್ನು ಹೃದಯದಲ್ಲಿ ಧಾರಣೆ ಮಾಡುವುದನ್ನು ತಪ್ಪಿಸಿ. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.

ನಾನು ಆತ್ಮ ಜ್ಞಾನ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಪರಮಾತ್ಮನ ಪ್ರೀತಿಯ ಉಯ್ಯಾಲೆಯಲ್ಲಿ ತೂಗುವಂತಹ ಅವಿನಾಶಿ ರತ್ನಭವ! ಎಂಬ ವರದಾನದ ವರದಾನಿ.

2. ನಾನು ಪರಮಾತ್ಮನ ಪ್ರೀತಿಯಲ್ಲಿ ಲವಲೀನವಾಗಿ ಖುಷಿಯಾಗಿ ಸರ್ವಶಕ್ತಿಗಳ ಆಧಾರದಿಂದ ಮಾಯೆಗೆ ಬೀಳ್ಕೊಡುಗೆ ಕೊಡುವ ಮಾಸ್ಟರ್ ಸರ್ವ ಶಕ್ತಿವಂತನು.

3. ನಾನು ಬ್ರಾಹ್ಮಣ ಜನ್ಮ ಪಡೆಯುತ್ತಿದ್ದಂತೆಯೇ ಮೂರನೆಯ ನೇತ್ರವನ್ನು ಪಡೆದಿದ್ದೇನೆ.

4. ನಾನು ಉತ್ಸವವನ್ನು ಆಚರಿಸಿಕೊಳ್ಳುವುದು ಅರ್ಥಾತ್ ತಯಾರಾಗುವುದು ಮತ್ತು ಇತರರನ್ನು ತಯಾರು ಮಾಡುವುದು ಎಂಬ ಸ್ಮೃತಿಯಲ್ಲಿದ್ದೇನೆ.

5. ನಾನು ಉತ್ಸವವನ್ನು ಆಚರಿಸಿಕೊಳ್ಳುವ ಸಯದಲ್ಲಿ "ನಾನು ಸದಾ ನೆನಪು(ಸ್ಮೃತಿ) ಮತ್ತು ಸೇವೆಯ ಉತ್ಸಾಹದಲ್ಲಿ ಇರುವಂತಹ ಆತ್ಮನಾಗಿದ್ದೇನೆ" ಎಂಬ ಸ್ಮೃತಿಯಲ್ಲಿದ್ದೇನೆ.

6. ನಾನು ಉತ್ಸಾಹದಲ್ಲಿ ಇರುತ್ತಾ, ಉತ್ಸಾಹದಲ್ಲಿ ತರುವ ಉತ್ಸವವನ್ನು ಆಚರಿಸಿಕೊಂಡಿದ್ದೇನೆ. (ಇದು ಬ್ರಾಹ್ಮಣರ ವ್ಯಾಪಾರವಾಗಿದೆ)

7. ನಾನು ಉತ್ಸಾಹ ಕೊಡುವ ಮಾತುಗಳನ್ನು ಮಾತನಾಡುತ್ತಿದ್ದೇನೆ ಮತ್ತು ಉತ್ಸಾಹದಿಂದ ತುಂಬಿರುವ ಕಥೆಗಳನ್ನು ಕೇಳಿಸಿ ಅಳುವವರಿಂದ  ಕೂಡ ಉತ್ಸಾಹದ ನೃತ್ಯ ಮಾಡಿಸಿದ್ದೇನೆ.

8. ಸಂಬಂಧ ಸಂಪರ್ಕಗಳಲ್ಲಿ ಎಂತಹ ಆತ್ಮರೇ ಇದ್ದರೂ, ನಕಾರಾತ್ಮಕದವರಿದ್ದರೂ, ಎದುರಿಸುವವರು ಇದ್ದರೂ, ಬ್ರಾಹ್ಮಣ ಜೀವನವನ್ನು ಅಲುಗಾಡಿಸುವವರಿದ್ದರೂ ನಾನು ನಕಾರತ್ಮಕತೆ ಮತ್ತು ವ್ಯರ್ಥ ದೃಷ್ಟಿಕೋನವನ್ನು ಸಮಾಪ್ತಿ ಮಾಡಿ ಸ್ನೇಹ ಮತ್ತು ಶಕ್ತಿಯನ್ನು ಕೊಡುವ ದಿವ್ಯ ಮೂರ್ತಿ ಯಾಗಿದ್ದೇನೆ.

9. ನಾನು ನಕಾರಾತ್ಮಕತೆಯನ್ನು, ವ್ಯರ್ಥ ದೃಷ್ಟಿಕೋನವನ್ನು ಮನಸ್ಸು, ಬುದ್ಧಿಯಲ್ಲಿ ಧಾರಣೆ ಮಾಡದೇ, ಪರಿವರ್ತನೆ ಮಾಡಿ ಹೃದಯದಲ್ಲಿ ಸಮಾವೇಶಗೊಳಿಸಿಕೊಂಡು ತಂದೆಯಿಂದ, ಬ್ರಾಹ್ಮಣ ಪರಿವಾರದಿಂದ ಅವಾರ್ಡನ್ನು ಪಡೆಯುವ ಪಾತ್ರನಾಗಿದ್ದೇನೆ.

10. ನಾನು ದೃಢಸಂಕಲ್ಪವನ್ನು ಮಾಡಿ ಆ ಸಂಕಲ್ಪವನ್ನು ಪ್ರತ್ಯಕ್ಷದಲ್ಲಿ ತಂದು ಬಾಪ್‌ದಾದಾರವರಿಂದ ಪಡೆದ ಎಕ್ಸ್ಟ್ರಾ ಸಹಯೋಗವನ್ನು ಅನುಭವ ಮಾಡಿದ್ದೇನೆ.

11. ನಾನು ಒಂದೇ ಬಲ, ಒಂದೇ ಭರವಸೆಯಿಂದ ಏನಾದರೂ ಆಗಲಿ, ನಾನು ತಯಾರಾಗಲೇಬೇಕು ಎಂಬ ಸಂಕಲ್ಪರೂಪಿ ಪಾದವನ್ನು ಅಲುಗಾಡಿಸಿದೆ ಗಟ್ಟಿಯಾಗಿ ಇಟ್ಟಿದ್ದೇನೆ.

12. ಕಪ್ಪು ಮೋಡಗಳಂತಹ ಪರಿಸ್ಥಿತಿಗಳು ಬಂದರೂ ಅದರಲ್ಲಿ ಸಮಸ್ಯೆಗೆ ಸಮಾಧಾನ ಕಾಣಿಸದಿದ್ದರೂ ಆ ಮೋಡಗಳು ಬಂದಿರುವುದು ಹೋಗಲು ಎಂಬ ದೃಢ ನಿಶ್ಚಯದಿಂದ ಹಾರುವ ಕಲೆಯ ಸ್ಥಿತಿಯಲ್ಲಿದ್ದು ವಿಜಯವನ್ನು ಪಡೆದಿರುವ ವಿಜಯೀ ಸ್ವರೂಪ.

13. ನಾನು ವಿಷಯಗಳೆಂಬ ಯಮದೂತರನ್ನು ಧರ್ಮರಾಜಪುರಿಗೆ ಹೋಗಲು ಕೊಡದೇ, ಸಂಗಮ ಯುಗದಲ್ಲಿಯೇ ಸ್ವಭಾವ, ಸಂಸ್ಕಾರಗಳ ರೂಪದಲ್ಲಿ ಕರ್ಮದ ಖಾತೆಯನ್ನು ಪೂರ್ಣ ಮಾಡಿಕೊಳ್ಳುತ್ತಿದ್ದೇನೆ.

14. ನಾನು ವ್ಯರ್ಥ ಸಂಕಲ್ಪಗಳನ್ನು ಹಾರುವ ಕಲೆ ಮತ್ತು ಶಕ್ತಿಯಿಂದ ಪರಿವರ್ತನೆ ಮಾಡಿದ್ದೇನೆ.

15. ಯಾವುದೇ ಗಾಬರಿಯಾಗುವಂತಹ ವಿಷಯಗಳು ಬಂದಾಗಲೂ ನಾನು ತ್ರಿಕಾಲದರ್ಶಿಯಾಗಿ ಮನಸ್ಸಿನಲ್ಲಿ ಶಸ್ತ್ರಗಳನ್ನು, ಶಕ್ತಿಗಳನ್ನು ಪ್ರತ್ಯಕ್ಷ ಮಾಡಿ ಮಾಯೆಯಿಂದ ನಿರ್ಭಯವಾಗಿರುವ ಮಾಯಾಜಿತ್ ಸ್ವರೂಪ.

16. ನಾನು ಸಂಬಂಧಗಳಲ್ಲಿ ಸ್ನೇಹ, ನಿರ್ಮಾಣತೆ, ಶುಭ ಭಾವನೆ, ದಯೆಯಿಂದ ಇದ್ದು ಕಾರಣವನ್ನು ಅಥವಾ ಸಮಸ್ಯೆಯನ್ನು ಸಮಾಧಾನದಲ್ಲಿ ಪರಿವರ್ತನೆ ಮಾಡಿದ್ದೇನೆ.

17. ನಾನು ಸ್ವ ಪರಿವರ್ತನೆಯಿಂದ ವಿಶ್ವ ಪರಿವರ್ತನೆ ಮಾಡುತ್ತೇನೆ ಎಂಬ ಪ್ರತಿಜ್ಞೆಯ ಪ್ರತ್ಯಕ್ಷ ಸ್ವರೂಪ.

18. ನಾನು ವಿಷಯ(ಮಾತು)ಗಳನ್ನು ಬದಲಾಯಿಸಲು ಸಹಯೋಗವನ್ನು ಕೊಡುತ್ತಿದ್ದೇನೆ. (ಇವರು ಬದಲಾಗುವುದಿಲ್ಲ ಎಂಬ ಸರ್ಟಿಫಿಕೇಟ್ ಅನ್ನು ಕೊಡುವುದಲ್ಲ).

19. ನಾನು ಉತ್ಸಾಹ ಉಲ್ಲಾಸಗಳಲ್ಲಿ ಇದ್ದು ಯಾವ ವಿಷಯದಲ್ಲಿಯೂ ನಿರಾಶೆ ಮತ್ತು ಬಲಹೀನ ಆಗುವುದಿಲ್ಲ.